ಕಳುಹಿಸಲು ಒಪ್ಪಿಗೆ ನೀಡಿದಳು. ಲಕ್ಷ್ಮಿ ಕೇಶವರಿಗೆ ಹಾಲು ಕುಡಿದಷ್ಟು ಆನಂದವಾಯಿತು. ಆವತ್ತು ರಾತ್ರಿ ಊರಿನಲ್ಲಿಯೇ ಉಳಿದು ಬೆಳಿಗ್ಗೆ ಎದ್ದು ಸುನಂದಾಳನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗುವುದು ಎಂದು ನಿರ್ಧರಿಸಿಕೊಂಡರು.

ಸಂಪಿಗಮ್ಮ, ಇದೇನನ್ನೂ ತಿಳಿಯದೆ ಮನೆಯ ಹೊರಗಿನ ಪಡಸಾಲೆಯಲ್ಲಿ ಸಾವಿತ್ರಿ, ಸುಶೀಲರೊಂದಿಗೆ ಆಟವಾಡುತ್ತಿದ್ದ ಸುನಂದಾಳನ್ನು ಕರೆದುಕೊಂಡು ಬಂದು ಕೇಶವ ಲಕ್ಷ್ಮಿಯ ಎದುರಿಗೆ ನಿಲ್ಲಿಸಿ 'ನಾಳೆ ನೀನು ಚಿಕ್ಕಪ್ಪ ಚಿಕ್ಕಮ್ಮನ ಜೊತೆ ಬೆಂಗಳೂರಿಗೆ ಹೋಗುತ್ತೀಯಾ...' ಎಂದು ಮೈದಡವಿ ಕೇಳಿದಾಗ 'ಹುಹೂಂ... ನಾನು ಹೋಗಲ್ಲ...' ಎಂದ ಮುಗ್ಧ ಮಗುವಿನ ಮಾತಿನಿಂದ ಎಲ್ಲರಿಗೂ ತುಸು ಪಿಚ್ಚೆನಿಸಿತು. ಆದರೂ ಸಂಪಿಗಮ್ಮ ಮಗಳನ್ನು ಎತ್ತಿಕೊಂಡು ಗಲ್ಲಕ್ಕೆ ಮುತ್ತು ಕೊಟ್ಟು 'ಅಲ್ಲಿ ಕಾರು, ಬಸ್ಸು ಎಲ್ಲಾ ಇರ್ತವೆ... ಅವರ ಜೊತೆ ಹೋದರೆ ಚಿಕ್ಕಪ್ಪ ಅಂಗಡಿಯಲ್ಲಿ ಚಾಕೋಲೇಟು ಎಲ್ಲಾ ತಂದುಕೊಡ್ತಾರೆ...' ಎಂದು ಏನೇನೋ ಆಸೆ ತೋರಿಸಿ ಮಗಳ ಬಳಿಯಲ್ಲಿ ಹೂಂ ಅನ್ನಿಸಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. 'ನಾನು ಹೋಗಲ್ಲ... ನಾನು ಹೋಗಲ್ಲ...' ಎಂದು ತಲೆಯನ್ನು ಜೋರಾಗಿ ಅಲುಗಾಡಿಸುತ್ತಾ ತನ್ನ ಅವ್ವನ ಕುತ್ತಿಗೆಯನ್ನು ಬಿಗಿಯಾಗಿ ತಬ್ಬಿಕೊಂಡ ಸುನಂದಾಳನ್ನು ಕಂಡು ಎಲ್ಲರಿಗೂ ಕನಿಕರವಾದರೂ ಬೆಂಗಳೂರಿಗೆ ಹೋಗಿ ಒಂದಷ್ಟು ದಿನ ಕಳೆದ ಮೇಲೆ ಹೊಂದಿಕೊಳ್ಳುತ್ತಾಳೆ ಎಂದು ಮಾತನಾಡಿಕೊಂಡು ಸಮಾಧಾನಪಟ್ಟುಕೊಂಡರು.

**ಸಂಪಿಗಮ್ಮನಿಗೆ ತನ್ನ ಎದೆಯಲ್ಲಿ ಏನೋ ಚುಚ್ಚಿದಂತಾದರೂ ನನ್ನ ಮೂಗು, ಕಣ್ಣು, ಬಣ್ಣಗಳನ್ನೇ ಹೊತ್ತುಕೊಂಡು ಎತ್ತರವಾಗಿ ಬೆಳೆದಿರುವ ನನ್ನ ಮಗಳು ಮೈದುನವಾರಗಿತ್ತಿಯರ ಬಳಿ ಸುಖವಾಗಿದ್ದಾಳೆ ಎಂಬುದನ್ನು ಅರಿತು ನಗುನಗುತ್ತಲೇ ಕಳುಹಿಸಿಕೊಡುತ್ತಿದ್ದಳು.**

ಮರುದಿನ ಎಳೆಯಮಗು ಜಯರಾಮನನ್ನು ಎತ್ತಿಕೊಂಡು, ಸುನಂದಾಳನ್ನು ಕರೆದುಕೊಂಡು ಲಕ್ಷ್ಮಿ ಕೇಶವರ ಜೊತೆ ಸಂಪಿಗಮ್ಮನೂ ಬೆಂಗಳೂರಿಗೆ ಬಂದಳು. ಆ ದಿನ ರಾತ್ರಿ ಅಲ್ಲೇ ಇದ್ದು ಮಾರನೇ ದಿನ ಬೆಳ್ಳಂಬೆಳಿಗ್ಗೆಯೇ ಹಾಸಿಗೆಯಲ್ಲಿ ಮಲಗಿದ್ದ ಸುನಂದಾಳನ್ನು ಮೈದುನನ ಮನೆಯಲ್ಲಿ ಬಿಟ್ಟು ಬಸ್ಸು ಹತ್ತಿದಾಗ ಸಂಪಿಗಮ್ಮನ ಕಣ್ಣುಗಳು ಹನಿಗೂಡಿದ್ದವು. ಹಾಸಿಗೆಯಿಂದ ಎದ್ದ ಸುನಂದಾ ತನ್ನ ಅವ್ವನನ್ನು ಕಾಣದೆ 'ಅವ್ವೋ, ಅವ್ವೋ...' ಎಂದು ಮನೆಯನ್ನೆಲ್ಲಾ ಹುಡುಕಿ ಇನ್ನಿಲ್ಲದಂತೆ ಅಳತೊಡಗಿದಾಗ ಅವಳನ್ನು ಸುಧಾರಿಸುವುದರಲ್ಲಿ ಲಕ್ಷ್ಮಿ ಕೇಶವರಿಗೆ ಸಾಕು ಸಾಕಾಗಿ ಹೋಯಿತು. ಬೈಕಿನಲ್ಲಿ ಸುನಂದಾಳನ್ನು ಕುಳ್ಳಿರಿಸಿಕೊಂಡು ರಸ್ತೆಯಲ್ಲಿ ಹೋಗುತ್ತಿದ್ದ ಬಸ್ಸು, ಕಾರುಗಳನ್ನು ತೋರಿಸಿ, ಅಂಗಡಿಮುಂಗಟ್ಟುಗಳಿಗೆ ಕರೆದೊಯ್ದು ಚಾಕೋಲೇಟು, ಆಟದ ಸಾಮಾನುಗಳನ್ನು ಕೊಡಿಸಿದರು. ಅವುಗಳಿಂದ ತುಸು ಸಮಾಧಾನಪಟ್ಟಂತೆ ಕಂಡ ಸುನಂದಾ ಮತ್ತೆ ರಾತ್ರಿಯಾದೊಡನೆ ಅವ್ವೋ... ಅವ್ವೋ... ಎಂದು ಅಳತೊಡಗಿದ್ದನ್ನು ಕಂಡು ಗಂಡ ಹೆಂಡತಿ ಇಬ್ಬರಿಗೂ ಸಾಕಷ್ಟು ಬೇಸರವಾಯಿತು. ಆದರೂ ಇನ್ನಿಲ್ಲದ ಸಹನೆ ತಂದುಕೊಂಡು ಸುನಂದಾಳನ್ನು ಮುದ್ದಿಸಿ ಊಟ ಮಾಡಿಸಿ ಮಲಗಿಸಿದರು.